ದಿನಾಂಕ 02.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

-

**ಪಾಟೀ ಸವಾಲುಃ ಪ್ರತಿವಾದಿಯ ಪರ ಮಾನ್ಯ ಶ್ರೀ ಹೆಚ್ ಆರ್ ವಿ ವಕೀಲರಿಂದಃ**

ನನ್ನ ತಂದೆಯ ಹೆಸರು ಚೂಡೇಗೌಡ ಆಗಿದ್ದು, ಅವರಿಗೆ ಬೇರೆ ಹೆಸರು ಇರುವುದಿಲ್ಲ. ಸದರಿ ನನ್ನ ತಂದೆಗೆ ಚೆನ್ನೇಗೌಡ ಎಂದು ಕರೆಯುತ್ತಿದ್ದರೂ ಎಂದರೆ ನನಗೆ ಗೊತ್ತಿಲ್ಲ. ನನಗೆ ಒಂದನೇ ಪ್ರತಿವಾದಿ ನನ್ನ ತಮ್ಮ. ಎರಡನೇ ಪ್ರತಿವಾದಿ ಒಂದನೇ ಪ್ರತಿವಾದಿಯ ಮಗ. ಸರ್ವೇ ನಂಬರ್ 229 ಜಮೀನು ನಮ್ಮ ಪ್ರಿತಾರ್ಜಿತ ಆಸ್ತಿಯಾಗಿರುತ್ತದೆ. ನನಗೆ ವಿಭಾಗದಲ್ಲಿ ಸರ್ವೇ ನಂಬರ್ 229 ರಲ್ಲಿ ಜಮೀನು ಹಾಗೂ ಬೇರೆ ಸರ್ವೇ ನಂಬರ್ 225 ರಲ್ಲಿ ಜಮೀನು ಬಂದಿರುತ್ತದೆ. ಸದರಿ ಎಲ್ಲಾ ಜಮೀನು ಗಡಿಗೇಶ್ವರ ಆಳುವಳ್ಳಿ ಗ್ರಾಮಕ್ಕೆ ಸಂಬಂಧಪಟ್ಟ ಜಮೀನುಗಳು ಆಗಿರುತ್ತದೆ ಎಂದರೆ ಸರಿ. ಸದರಿ ನನ್ನ ಮತ್ತು ಒಂದನೇ ಪ್ರತಿವಾದಿಯ ಮಧ್ಯೆ ವಿಭಾಗವು ಯಾವಾಗ ಆಗಿರುತ್ತದೆ ಎಂದು ಈಗ ನನಗೆ ನೆನಪಿಲ್ಲ. ನನಗೆ ವಿಭಾಗದಲ್ಲಿ ಬಂದಿರುವ ಜಮೀನುಗಳನ್ನು ಪುನೀತ್ ಎನ್ನುವರಿಗೆ ಮಾರಾಟ ಮಾಡಿರುತ್ತೇನೆ. ಯಾವ ವರ್ಷದಲ್ಲಿ ಮಾರಾಟ ಮಾಡಿರುತ್ತೇನೆ ಎಂದು ಸರಿಯಾಗಿ ನೆನಪಿಲ್ಲ. ಸದರಿ ನನ್ನ ಜಮೀನುಗಳನ್ನು ಮಾರಾಟ ಮಾಡಿದ ನಂತರ ನಾನು ನನ್ನ ಸ್ವಂತ ಮನೆ ಆಡುವಳ್ಳಿಯಲ್ಲಿ ಇದ್ದೆ. ಸದರಿ ಮನೆಯು ದರ್ಕಾಸ್ತಿನಲ್ಲಿ ನನಗೆ ಆಗಿರುತ್ತದೆ. ಸದರಿ ನನ್ನ ಮನೆ ಸರ್ವೇ ನಂಬರ್ 242 ರಲ್ಲಿ ಬರುತ್ತದೆ. ದಾವಾ ಆಸ್ತಿಯು ನನಗೆ 15-08-1991 ರಲ್ಲಿ ಮಂಜೂರಾಗಿರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿ ನಾನು ಈ ಸ್ವತ್ತು ಮಾಡಿಸಿಕೊಂಡಿರುವುದಿಲ್ಲ. ನನ್ನ ಜೊತೆ ಬೇರೆ ಯಾರು ಯಾರಿಗೆ ಮಂಜೂರು ಆಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ನನಗೆ ಮಂಜೂರು ಮಾಡುವ ಮೊದಲು ಸ್ಕೇಚ್ ಅನ್ನು ಮಾಡಿರುತ್ತಾರೆ. ಸದರಿ ಸ್ಕೇಚ್ ಅನ್ನು ನಾನು ನೋಡಿರುವುದಿಲ್ಲ. ದಾವಾ ತರುವ ಮೊದಲು ನಾನು ಸ್ಕೇಚ್ ಅನ್ನು ಪರಿಶೀಲನೆ ಮಾಡಿ ದಾವೆಯನ್ನು ತಂದಿರುವುದಿಲ್ಲ. ಸಾಮಾನ್ಯವಾಗಿ ಮಂಜೂರು ಮಾಡಬೇಕಾದರೆ ಮಹಜರು ಮಾಡಿ ನಕಾಶೆ ಮಾಡಿ ನಂತರ ಮಂಜೂರು ಮಾಡುತ್ತಾರೆ ಎಂದರೆ ಸರಿ. ದಾವಾ ಆಸ್ತಿಯನ್ನು ಮಂಜೂರು ಮಾಡಲು ನಾನು ಅರ್ಜಿಯನ್ನು ಕೊಟ್ಟಿರುತ್ತೇನೆ. ಯಾವ ಸಮಯದಲ್ಲಿ ಅರ್ಜಿಯನ್ನು ಕೊಟ್ಟಿರುತ್ತೇನೆ ಎಂದು ಈಗ ಹೇಳಲು ಆಗುವುದಿಲ್ಲ. ಮಹಜರು ಮಾಡಿ ನಕಾಶಯಾದರೆ ಸ್ಕೇಚ್ ಪ್ರಕಾರ ಮಂಜೂರು ಯಾರು ಯಾರಿಗೆ ಆಗಿದೆ ಎಂದು ಹೇಳಲು ನನಗೆ ಗೊತ್ತಿರುವುದಿಲ್ಲ. ಈ ಹಿಂದೆ ನಕಾಶೆಯಾಗಿ ಯಾರು ಯಾರಿಗೆ ಮಂಜೂರಾಗಿರುತ್ತದೆ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ. ನಿಪಿ-1 ರಲ್ಲಿ ತೋರಿಸಿರುವ ಆಸ್ತಿಯು ಈ ಹಿಂದೆ ಬೇರೆಯವರಿಗೆ ಮಂಜೂರಾಗಿರುವ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸೈಟ್ ನಂಬರ್ -3 ಈ ಹಿಂದೆ 1974 ರಲ್ಲಿ ಶ್ರೀರಂಗ್ಯಯ್ಯ ಬಿನ್ ಚೌಡಯ್ಯರವರಿಗೆ ಮಂಜೂರಾಗಿರುತ್ತದೆ ಎಂದರೆ ಸರಿ ಯಲ್ಲ. ನಾನು ಹೇಳುವ ದಾವಾ ಆಸ್ತಿಯ ಮನೆಯ ಸುತ್ತ ಮುತ್ತಲೂ 202 ಸರ್ವೇ ನಂಬರ್ ಬರುತ್ತದೆ. ಸರ್ವೇ ನಂಬರ್ 242 ರಲ್ಲಿ ಪ್ರತಿವಾದಿಗೆ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಸರ್ವೇ ನಂಬರ್ 242 ಹಾಗೂ 228 ಗಳ ಜಮೀನುಗಳಲ್ಲಿ ಸಾಗುವಳಿ ಮಾಡಿಕೊಂಡು ಸುತ್ತ ಬೇಲಿ ಹಾಕಿರುತ್ತಾರೆ ಎಂದರೆ ಸಾಕ್ಷಿಯು ಸರ್ವೇ ನಂಬರ್ 228 ರಲ್ಲಿ ಪ್ರತಿವಾದಿಯರು ಇರುತ್ತಾರೆ, ಸರ್ವೇ ನಂಬರ್ 242 ರಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 242 ರಲ್ಲಿ ಪ್ರತಿವಾದಿಗೆ ಜಮೀನು ಇರುತ್ತದೆ ಎಂದರೆ ಅದು ದೊಡ್ಡ ಸರ್ವೇ ನಂಬರ್ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿ ತಾಲ್ಲೂಕು ಕಚೇರಿಯಲ್ಲಿ ನಾನು ಬೇರೆ ಯಾವುದೇ ದಾಖಲೆಗಳನ್ನು ಪಡುಕೊಂಡಿರುವುದಿಲ್ಲ. ನಿಪಿ-1 ನನಗೆ ತಾಲ್ಲೂಕು ಕಚೇರಿಯಿಂದ ನೀಡಿರುವುದಿಲ್ಲ, ನಾನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 1991-92 ನೇ ಇಸವಿಯಲ್ಲಿ ದಾವಾ ಆಸ್ತಿಗೆ ಸಂಬಂದಿಸಿ ಯಾವುದೇ ಮಂಜೂರು ಆಗಿರುವುದಿಲ್ಲ, ಯಾವುದೇ ದಾಖಲೆ ನೀಡಿರುವುದಿಲ್ಲ, ನಿಪಿ-1 ನಾನು ಸೃಷ್ಟಿಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ರಮೇಶ್ ಗೌಡ, ನಾಗಪ್ಪ ಗೌಡ ಪರಿಚಯ ಇರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ನೀಡಲಾಯಿತು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿ ಸಹಿಃ

ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ನ.ರಾ. ಪುರ.